ನೆಲಮಂಗಲ ಪೋಲೀಸ್ ಠಾಣೆ ಸರಹದ್ದಿನ ಹೇರೋಹಳ್ಳಿ, ಕೊಡಿಗೆಹಳ್ಳಿ, ದೊಡ್ಡಬಿದರಕಲ್ಲು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಸಾರ್ವಜನಿಕರಿಗೆ ರಕ್ಷಣೆ ಒದಗಿಸಲು ಈಗಾಗಲೇ ಬ್ಯಾಡರಹಳ್ಳಿ ಬಳಿ ಒಂದು ಪೋಲೀಸ್ ಹೊರ ಠಾಣೆಯನ್ನು ಪ್ರಾರಂಭಿಸಲಾಗಿದೆ ಮತ್ತು ಸೂಕ್ತ ಗಸ್ತು ವ್ಯವಸ್ಥೆಯನ್ನು ಏರ್ಪಡಿಸಲಾಗಿದೆ. ಈ ಪ್ರದೇಶವು ಸೂಕ್ಷ್ಮ ಪ್ರದೇಶವಾದುದ್ದರಿಂದ ಹಿರಿಯ ಅಧಿಕಾರಿಗಳು ಈ ಪ್ರದೇಶಗಳಿಗೆ ಆಗಾಗ್ಗೆ ಭೇಟಿ ನೀಡಿ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿರುತ್ತಾರೆ.

ಇಲ್ಲಿಯವರೆಗೂ ಯಾವುದೇ ಭಯದ ವಾತಾವರಣದ ದೂರುಗಳು ಬಂದಿರುವುದಿಲ್ಲ.

ಆ) ಇದು ಸತ್ಯಕ್ಕೆ ದೂರವಾಗಿದೆ.

ಪೀಣ್ಯ ಮತ್ತು ರಾಜಗೋಪಾಲ ನಗರ ಪೋಲೀಸ್ ಠಾಣೆಗಳ (ಬೆಂಗಳೂರು ನಗರ ಪೋಲೀಸ್) ವ್ಯಾಪ್ತಿಗೆ ಬರುವ ಗ್ರಾಮಗಳಿಂದ ಸ್ವೀಕರಿಸುವ ಫಿರ್ಯಾದು ದೂರುಗಳ ಬಗ್ಗೆ ತಕ್ಷಣ ಕಾನೂನು ರೀತ್ಯಾ ಕ್ರಮ ಕೈಗೊಂಡು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ತದನಂತರ ಸರಹದ್ದಿನ ಆಧಾರದ ಮೇರೆಗೆ ಮುಂದಿನ ತನಿಖೆ ಸಲುವಾಗಿ ಪ್ರಕರಣವನ್ನು ಬೆಂಗಳೂರು ಜಿಲ್ಲೆಗೆ ವರ್ಗಾಯಿಸಲಾಗುತ್ತಿದೆ.

ಕ್ರಮ ಜರುಗಿಸಲು ಬರುವುದಿರಲ್ಲವೆಮಧೂ ತಿಳಿಸಿರುವ ಬಗ್ಗೆ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ.

ಇ) ಈ ಠಾಣೆಗಳಿಗೆ ದೂರದಲ್ಲಿರುವ ಗ್ರಾಮಗಳ ಸಾರ್ವಜನಿಕರಿಗೆ ರಕ್ಷಣೆ ಒದಗಿಸಲು ಹಾಲಿ ಬ್ಯಾಡರಹಳ್ಳಿಯಲ್ಲಿ ಈಗಾಗಲೇ ಹೊರಠಾಣೆಯನ್ನು ಪ್ರಾರಂಭಿಸಲಾಗಿದೆ.

ಈ ಪ್ರದೇಶಗಳಲ್ಲಿ ಸಾರ್ವಜನಿಕರ ರಕ್ಷಣೆ ಸಲುವಾಗಿ ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ, ತಾವರೆಕೆರೆ ಪೋಲೀಸ್ ಠಾಣಾ ವ್ಯಾಪ್ತಿಗೆ ಬರುವ ಅಂದ್ರಹಳ್ಳಿ ಬಳಿ ಹಾಗೂ ನೆಲಮಂಗಲ ಪೋಲೀಸ್ ಠಾಣೆ ಸರಹದ್ದಿನ ಮಾದನಾಯಕನಹಳ್ಳಿ ಗ್ರಾಮದಲ್ಲಿ ಹೊಸದಾಗಿ ಪೋಲೀಸ್ ಠಾಣೆ ತೆರೆಯುವ ಬಗ್ಗೆ ಇಲಾಖೆಯಲ್ಲಿ ಪ್ರಸ್ತಾವನೆ ಸ್ವೀಕರಿಸಲಾಗಿದ್ದು, ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

5348(5780) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 2004–05ನೇ ಸಾಲಿನಲ್ಲಿ ಬೆಂಗಳೂರು ಮಹಾನಗರ ತೋಟಗಾರಿಕಾ ವಿಭಾಗದಲ್ಲಿ ನಗರದ 100 ವಾರ್ಡ್‌ಗಳಲ್ಲಿ ಕೈಗೊಂಡಿರುವ ಹಾಗೂ ಕೈಗೊಳ್ಳಲು ಅನುಮೋದಿಸಿರುವ ಕಾಮಗಾರಿಗಳು ಯಾವುವು; (ವಾರ್ಡ್‌ಗಳವಾರು ವಿವರ ನೀಡುವುದು);

ಆ) ಅದೇ ರೀತಿ ನಗರ ಪಾಲಿಕೆ ನಿರ್ವಹಣೆ ಮಾಡುವ ಉದ್ಯಾನವನಗಳ ಸಂಖ್ಯೆ ಎಷ್ಟು ಹಾಗೂ ಇದರ ನಿರ್ವಹಣೆಗಳಿಗಾಗಿ ಆಗುವ ಖರ್ಚು ಎಷ್ಟು;

ಇ) ಈ ಪೈಕಿ ಗುತ್ತಿಗೆದಾರರು ಉದ್ಯಾನವನಗಳ ನಿರ್ವಹಣೆ ಮಾಡಬೇಕಾದ ಕಾಮಗಾರಿ ಗಳ್ಯಾವುವು ಹಾಗೂ ಇವುಗಳ ಉಸ್ತುವಾರಿ ಯಾರಿಗೆ ವಹಿಸಲಾಗಿದೆ;

ಈ) ನಿಬಂಧನೆಗಳನ್ನು ಉಲ್ಲಂಘಿಸಿದ ಗುತ್ತಿಗೆದಾರರ ಮೇಲೆ ಯಾವ ಕ್ರಮ ಜರುಗಿಸಲಾಗಿದೆ ಮತ್ತು ಒಟ್ಟು ಎಷ್ಟು ಜನ ಗುತ್ತಿಗೆದಾರರಿಗೆ ಉದ್ಯಾನವನಗಳ ನಿರ್ವಹಣೆ ಗುತ್ತಿಗೆ ನಿಡಿದೆ;

ಉ) ಒಬ್ಬರೇ ಗುತ್ತಿಗೆದಾರರಿಗೆ ಒಂದಕ್ಕಿಂತ ಹೆಚ್ಚು ಉದ್ಯಾನಗಳ ಗುತ್ತಿಗೆ ನೀಡಿರುವ ವಿವರಗಳನ್ನು ನೀಡುವುದು;

ಊ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) 2004–05ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರಗಳನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.

ಆ) ನಗರ ಪಾಲಿಕೆಯಲ್ಲಿ ಒಟ್ಟು 432 ಉದ್ಯಾನವನಗಳಿದ್ದು, ಇವುಗಳಲ್ಲಿ 252 ಉದ್ಯಾನವನಗಳನ್ನು ಖಾಸಗಿ ಗುತ್ತಿಗೆದಾರರು ನಿರ್ವಹಿಸಲಾಗುತ್ತಿದ್ದು, ಇದರ ಒಟ್ಟು ವೆಚ್ಚ ರೂ. 5.08 ಕೋಟಿಗಳು.

ಇ) ವಿವರಗಳನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.

ಈ) ಗುತ್ತಿಗೆದಾರರು ಇಲ್ಲಿಯವರೆಗೆ ನಿಬಂಧನೆ ಉಲ್ಲಂಘಿಸಿರುವುದಿಲ್ಲ.

ಉ) ವಿವರಗಳನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.

ಊ) ಟೆಂಡರ್ ಮೂಲಕ ಯಶಸ್ವಿಯಾದವರಿಗೆ ಗುತ್ತಿಗೆ ನೀಡಲಾಗಿರುತ್ತದೆ.

5350(5794) ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ) : ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಳ್ಳೇಗಾಲದಲ್ಲಿ ಪಟ್ಟಣದ ರಸ್ತೆಗಳು ತುಂಬಾ ಹಾಳಾಗಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸುಮಾರು ಆರು ಬಡಾವಣೆಗಳಲ್ಲಿ ರಸ್ತೆಗಳ ಅಭಿವೃದ್ಧಿ ಇಲ್ಲದಿರುವುದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಸರ್ಕಾರಕ್ಕೆ ರಸ್ತೆ ಅಭಿವೃದ್ಧಿ ಪಡಿಸುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆಯೇ;

ಈ) ಹಾಗಿದ್ದಲ್ಲಿ, ಎಷ್ಟು ಅವಧಿಯೊಳಗೆ ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸ ಲಾಗುವುದು?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು) :

ಅ) ಹೌದು

ಆ) 11ನೇ ಹಣಕಾಸು ಯೋಜನೆಯಡಿಯಲ್ಲಿ ಕೊಳ್ಳೇಗಾಲ ಪುರಸಭೆಗೆ 2004–05ನೇ ಸಾಲಿನಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರೂ. 59,53,752 ಲಕ್ಷಗಳಷ್ಟನ್ನು ಹಾಗೂ ಎಸ್.ಎಫ್.ಸಿ ವಿಶೇಷ ಅನುದಾನದಡಿಯಲ್ಲಿ ರೂ.10 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಇ) ಹೌದು.

ಈ) ಸದರಿ ಕಾಮಗಾರಿಗಳನ್ನು ಕೂಡಲೇ ಪೂರ್ಣಗೊಳಿಸುವಂತೆ ಪುರಸಭೆಗೆ ತಿಳಿಸಲಾಗುವುದು.

5351(5795) ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ) : ಮಾನ್ಯ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಯಳಂದೂರು ಪಟ್ಟಣಕ್ಕೆ ಒಳಚರಂಡಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಹಾಗಿಲ್ಲದಿದ್ದರೆ ಮುಂದೆ ಒಳಚರಂಡಿ ಮಾಡಲು ಸರ್ಕಾರ ತುರ್ತು ಕ್ರಮ ಕೈಗೊಳ್ಳುವುದೇ;

ಈ) ಎಷ್ಟು ಅವಧಿಯೊಳಗೆ ಒಳಚರಂಡಿ ನಿರ್ಮಿಸಲು ಸರ್ಕಾರ ಉದ್ದೇಶಿಸಿದೆ?